ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 388/2018

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅನುಸೂಯ.ಎಸ್. |
| ತಂದೆ/ಪತಿಯ ಹೆಸರು | ಃ | ವೀರೇಂದ್ರ |
| ವಯಸ್ಸು | ಃ | 34 ವರ್ಷ |
| ವೃತ್ತಿ | ಃ | ಆರಕ್ಷಕ ಉಪನಿರೀಕ್ಷಕಿ, ಹಿರಿಯೂರು ನಗರ ಪೋಲೀಸ್ ಠಾಣೆ. |
| ವಾಸ | ಃ | ಹಿರಿಯೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 12.07.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2016 ಜೂನ್ 20 ರಿಂದ 2018 ಆಗಸ್ಟ್ 02 ವರೆಗೆ ಕೆ.ಆರ್.ಎಸ್. ಕೈಗಾರಿಕಾ ಭದ್ರತಾ ಪಡೆಯಲ್ಲಿ ಮಹಿಳಾ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2018 ಮಾರ್ಚ 13 ರಂದು ಬೃಂದಾವನ ಗಾರ್ಡನ ಮುಖ್ಯ ದ್ವಾರದಲ್ಲಿ ಬೆಳಿಗ್ಗೆ 08.00-02.00 ವರೆಗೆ ನನ್ನನ್ನು ಕರ್ತವ್ಯ ನಿರ್ವಹಿಸಲು ನೇಮಕ ಮಾಡಲಾಗಿತ್ತು. ಸುಮಾರು 12.00 ಸಮಯದಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿಯಾದ ಅಭಿಲಾಷ ರವರು ಶೌಚಾಲಯಕ್ಕೆಂದು ಬೃಂದಾವನ ಗಾರ್ಡನ್ ನಲ್ಲಿರುವ ಶೌಚಾಲಯಕ್ಕೆ ಹೋಗಿದ್ದೇವು. ನಾವು ಶೌಚಾಲಯದ ಒಳಗೆ ಇದ್ದಾಗೆ ಯಾರೋ ಹೊರಗಡೆಯಿಂದ ಬಂದ ಹಾಗೆ ಶಬ್ದವಾಯಿತು. ನಾವು ಹೊರಗಡೆ ಬಂದು ನೋಡಿದಾಗ ಅಲ್ಲಿ ಒಬ್ಬ ಹುಡುಗ ಇದ್ದಿದ್ದು ಕಂಡು ಬಂದಿತ್ತು

ನಾವು ಆತನನ್ನು ಕಂಡು ಇದು ಮಹಿಳಾ ಶೌಚಾಲವಾಗಿದ್ದು ನೀನು ಒಳಗಡೆ ಬರಬಾರದು ಎಂದು ತಿಳಿಸಿದ್ದೇವು. ಆಗ ಆತ ಅಲ್ಲಿಂದ ಹೊರಟು ಹೋದ. ನಂತರ ಒಂದು ನಿಮಿಷ ಕಳೆದ ನಂತರ ಮತ್ತೆ ಆತ ಶೌಚಾಲಯದ ಒಳಗೆ ಬಂದನು. ಇಲ್ಲಿಗೆ ಬರಬೇಡ ಎಂದರು ಏಕೆ ಬಂದೇ ಎಂದು ನಾವು ಪ್ರಶ್ನಿಸಿದ್ದೇವು. ಆಗ ಆತ ಕರೆಂಟ್ ಕನೆಷನ್ ಕೊಡಲು ಬಂದಿದ್ದೇನೆ ಎಂದು ತಿಳಿಸಿದನು. ಇದು ಮಹಿಳಾ ಶೌಚಾಲಯವಾಗಿದ್ದು ಬರಬಾರದು ಎಂದು ಮತ್ತೆ ಆತನಿಗೆ ತಿಳಿಸಿದ್ದು ಅಲ್ಲಿಂದ ಮತ್ತೆ ಆತ ಹೊರಗಡೆ ಹೋದನು. ಮತ್ತೆ ಶೌಚಾಲಯದ ಒಳಗೆ ಆ ವ್ಯಕ್ತಿ

ಬಂದಿರುತ್ತಾನೆ. ನಾವು ಆತನಿಗೆ ಮಹಿಳಾ ಶೌಚಾಲಯದ ಒಳಗೆ ಬರಬಾರದು ಎಂದು ಹೇಳಿ ಶೌಚಾಲಯದ ಹೊರಗೆ ಬಂದಿದ್ದು ಸದರಿ ವ್ಯಕ್ತಿ ಸಹ ಬಂದಿರುತ್ತಾನೆ.

ಶೌಚಾಲಯದ ಹೊರಗೆ ಬಂದಾದ ಮೇಲೆ ಆತನಿಗೆ ಮಹಿಳಾ ಶೌಚಾಲಯವಾಗಿದ್ದು ಇಲ್ಲಿ ಬರಬಾರದು ಎಂದು ಹೇಳಿದರು ಏಕೆ ಪದೇ ಪದೆ ಬರುತ್ತಿಯಾ ಎಂದು ಪ್ರಶ್ನಿಸಿರುತ್ತಾರೆ. ಆಗ ಆತ ನಮ್ಮನ್ನು ಕೆಟ್ಟ ಶಬ್ದಗಳಿಂದ ಅವಾಚ್ಯವಾಗಿ ಬೈದಿರುತ್ತಾನೆ. ಅಷ್ಟರಲ್ಲಿ ಅಲ್ಲಿಗೆ ಪ್ರಸನ್ನ ಕುಮಾರ್ ಎಂಬುವ ವ್ಯಕ್ತಿ ಬಂದಿರುತ್ತಾರೆ. ಅವರು ನಮಗೆ ಈತ ನನ್ನ ಮಗ ನಾನು ಆತನಿಗೆ ತಿಳುವಳಿಕೆ ಹೇಳುತ್ತೇನೆಂದು ತಿಳಿಸಿರುತ್ತಾರೆ ಮತ್ತು ಆತನನ್ನು ಅಲ್ಲಿಂದ ಕರೆದುಕೊಂಡು ಹೋಗಿರುತ್ತಾರೆ.

ನಾವು ದಿಃ 13.03.2018 ರಂದು ಶೌಚಾಲಯದಲ್ಲಿದ್ದಾಗ ಅಲ್ಲಿ ಒಳ ಪ್ರವೇಶಿಸಿ ನಂತರ ಹೊರಗೆ ಆತನನ್ನು ಪ್ರಶ್ನಿಸಿದ್ದಾಗ ನಮ್ಮನ್ನು ಅವಾಚ್ಯ ಬೈದಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ಮಾನ್ಯ ಸಿ.ಆರ್.ಎಸ್. ವಕೀಲರಿಂದ</u>**

ಮುಖ್ಯ ದ್ವಾರದಿಂದ ಘಟನೆ ನಡೆದ ಶೌಚಾಲಯಕ್ಕೆ ಸುಮಾರು 100 ಮಿ ಅಂತರವಿರುತ್ತದೆ. ಘಟನೆ ನಡೆಯಲಾಯಿತು ಎನ್ನುವ ದಿನ ನಾನು, ಅಭಿಲಾಷ ಹಾಗೂ ಶಿವಣ್ಣ ನವರನ್ನು ಹೊರತು ಪಡಿಸಿ ಇನ್ನೊಬ್ಬ ಪುರುಷ ಪೇದೆ ಸಹ ಕರ್ತವ್ಯದಲ್ಲಿದ್ದರು.

ಶೌಚಾಲಯ ನಿರ್ವಹಣೆ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಿಸಿರುತ್ತಾರೆ ಎಂದರೆ ಸರಿ. ಘಟನೆ ನಡೆಯಲಾಯಿತು ಎನ್ನುವ ಸಮಯದಲ್ಲಿ ಆ ವ್ಯಕ್ತಿ ಅಲ್ಲಿ ಇರಲಿಲ್ಲ. ಪುರಷ ಶೌಚಾಲಯ ಮಹಿಳಾ ಶೌಚಾಲಯದ ಪಕ್ಕದಲ್ಲಿರುತ್ತದೆ ಎಂದರೆ ಸರಿ. ಸದರಿ ಪುರಷ ಶೌಚಾಲಯದಲ್ಲಿ ನಿರ್ವಹಣೆ ಮಾಡಲು ನೇಮಿಸಿದ್ದ ವ್ಯಕ್ತಿ ಅಲ್ಲಿದ್ದ ಬಗ್ಗೆ ನಾನು ಗಮನಿಸಿಲ್ಲ.

ಶೌಚಾಲಯದ ಅಕ್ಕ ಪಕ್ಕ ಹಾಗೂ ಮುಂಭಾಗ ಅಂಗಡಿಗಳು ಇವೆ ಎಂದರೆ ಸಾಕ್ಷಿಯು ಮುಂಭಾಗ ಇರುತ್ತದೆ ಎಂದು ನುಡಿಯುತ್ತಾರೆ. ಘಟನೆ ನಡೆದ ಸಮಯದಲ್ಲಿ ಅಂಗಡಿಗಳು ತೆರೆದಿರಲಿಲ್ಲ. ಮಹಿಳಾ ಮತ್ತು ಪುರಷರ ಶೌಚಾಲಯದ ಬಾಗಿಲು ಉತ್ತರಕ್ಕೆ ಇರುತ್ತದೆ.

ಶೌಚಾಲಯದ ಒಳಗೆ ಮುಂಭಾಗದ ಎರಡು ಅಡಿ ನಂತರ ಶೌಚಾಲಯವು ಇರುತ್ತದೆ. ತನಿಖಾಧಿಕಾರಿಯವರ ಮುಂದೆ ಆರೋಪಿ ಬೈದ ಅವಾಚ್ಯ ಶಬ್ದಗಳನ್ನು ಹೇಳಲು ಬಾಧಕ ಇತ್ತು. ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈಯುವ ಕಾಲಕ್ಕೆ 2-3 ಜನ ವ್ಯಕ್ತಿಗಳು ಅಲ್ಲಿದ್ದರು ಅವರು ಯಾರೆಂದು ನನಗೆ ಗೊತ್ತಿಲ್ಲ.

ಗಲಾಟೆಯಾದ ಮೇಲೆ ನಾವು ನಮ್ಮ ಕರ್ತವ್ಯಕ್ಕೆ ಹೋಗಿರುತ್ತೇವೆ. ಘಟನೆ ಬಗ್ಗೆ ಅಲ್ಲಿದ್ದ ಎ.ಎಸ್.ಐ. ರವರಿಗೆ ತಿಳಿಸಿರುತ್ತೇವೆ. ದೂರು ನೀಡಲು ಮೇಲಾಧಿಕಾರಿಯವರ ಅನುಮತಿಯ ಅಗತ್ಯ ಇರುತ್ತದೆ.

ಗಲಾಟೆ ಸುಮಾರು 15 ನಿಮಿಷಗಳ ಆಗಿರುತ್ತದೆ. ಆರೋಪಿ ತಂದೆ ಪ್ರಸನ್ನ ಕುಮಾರ್ ಕೆ.ಆರ್.ಸಾಗರ ಪೋಲೀಸ್ ಠಾಣೆಯ ಎಸ್.ಐ. ವಿರುದ್ದ ಅಸಲು ದಾವಾಃ 139/2015 ರಂತೆ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಎಸ್.ಐ. ರವರ ವಿರುದ್ದ ಅಸಲು ದಾವೆ ದಾಖಲಾಗಿದ್ದ ಕಾರಣ ಆ ದಾವೆಯ ಸಲುವಾಗಿ ಆರೋಪಿ ವಿರುದ್ದ ಅವರ ಪ್ರೇರಣೆ ಮೇರೆಗೆ ಸುಳ್ಳು ದೂರು ಆರೋಪಿ ವಿರುದ್ದ ದಾಖಲು ಮಾಡಿಸಿದ್ದೇವೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.